ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 54 ಎಲ್‌ಜಿಪಿ 2017

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 16-10-2017.

# ಸುತ್ತೋಲೆ

**ವಿಷಯ:** ರಾಜ್ಯದಲ್ಲಿ ಅವಶ್ಯವಿರುವ ಕಡೆ ಧಾರ್ಮಿಕತೆ[Religion] ಆಧಾರದ ಮೇಲೆ ಜನರ ಶವ ಸಂಸ್ಕಾರಕ್ಕಾಗಿ ಸರ್ಕಾರಿ ಜಮೀನನ್ನು ಕಾಯ್ದಿರಿಸುವ ಬಗ್ಗೆ.

ಪ್ರಾದೇಶಿಕ ಆಯುಕ್ತರ ಕಾರ್ಯಾಲಯ
ಸ್ವೀಕೃತಿ
ದಿನಾಂಕ 10 NOV 2017
LND
ಶಾಖೆ ಸಂಕಲನ ಸ್ವೀಕೃತಿ ಸಂಖ್ಯೆ

**ಉಲ್ಲೇಖ:** 1) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 14 ಭೂಸ್ವಾವ್ಯಾ (3) 2002 ದಿನಾಂಕ: 28.05.2002.
2) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಭೂಸ್ವಾವ್ಯಾ 2011 ದಿನಾಂಕ: 06.06.2012.
3) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 149 ಎಲ್‌ಜಿಪಿ 2014, ದಿನಾಂಕ: 11.09.2014

* * *

ರಾಜ್ಯದಲ್ಲಿ ಸರ್ಕಾರಿ ಜಮೀನು ಲಭ್ಯವಿರುವೆಡೆ ವಿವಿಧ ಸಾರ್ವಜನಿಕ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 71ರಡಿ ಪ್ರದತ್ತವಾಗಿರುವ ಅಧಿಕಾರದನ್ವಯ ಜಿಲ್ಲಾಧಿಕಾರಿಗಳು ಅಗತ್ಯ ಜಮೀನು ಕಾಯ್ದಿರಿಸಲು ಅಧಿಕಾರವಿದ್ದು, ಅದರಂತೆ ಜನರ ಶವ ಸಂಸ್ಕಾರಕ್ಕಾಗಿ ಅವಶ್ಯವಿರುವ ಜಮೀನುಗಳ ಸೌಲಭ್ಯ ಒದಗಿಸಲು ಸಹ ಕ್ರಮವಹಿಸಬಹುದಾಗಿದೆ.

2. ರಾಜ್ಯದ ಅನೇಕ ಗ್ರಾಮಗಳಲ್ಲಿ ಜನರ ಶವ ಸಂಸ್ಕಾರಕ್ಕಾಗಿ ಜಮೀನುಗಳ ಸೌಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ದಿಸೆಯಲ್ಲಿ ಜಿಲ್ಲಾಡಳಿತದಿಂದ ಕೈಗೊಳ್ಳಬೇಕಾದ ಕೆಲವು ಕ್ರಮಗಳ ಕುರಿತು ಉಲ್ಲೇಖಿತ ಸುತ್ತೋಲೆಗಳಲ್ಲಿ ಸರ್ಕಾರವು ಸೂಚನೆಗಳನ್ನು ನೀಡಿದೆ. ಅವುಗಳೆಂದರೆ, ಮೇಲೆ (1)ರಲ್ಲಿ ಉಲ್ಲೇಖಿಸಿರುವ ದಿನಾಂಕ: 28.05.2002ರ ಸುತ್ತೋಲೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಸುಮಾರು 18 ರಿಂದ 20 ಗುಂಟೆ ಜಮೀನನ್ನು ಜನರ ಶವ ಸಂಸ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸಲು ಸೂಚಿಸಲಾಗಿದೆ. ಮುಂದುವರೆದು, ಮೇಲೆ (2)ರಲ್ಲಿ ಉಲ್ಲೇಖಿಸಿರುವ ದಿನಾಂಕ 06.06.2012ರ ಸುತ್ತೋಲೆಯಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಲ್ಲಿ ಅಗತ್ಯವಾದ ಖಾಸಗಿ ಖುಷ್ಕಿ ಜಮೀನನ್ನು ಭೂ ಮಾಲೀಕರಿಂದ ಮಾರ್ಗಸೂಚಿ ಬೆಲೆಯ ಮೂರು ಪಟ್ಟು ಹೆಚ್ಚು ಬೆಲೆಗೆ ನೇರವಾಗಿ ಖರೀದಿಸಿ ಸದರಿ ಉದ್ದೇಶಕ್ಕೆ ಕಾಯ್ದಿರಿಸಲು ಸೂಚಿಸಲಾಗಿದೆ. ಹಾಗೂ ಮೇಲೆ (3)ರಲ್ಲಿ ಉಲ್ಲೇಖಿಸಿರುವ ದಿನಾಂಕ 11.09.2014ರ ಸುತ್ತೋಲೆಯಲ್ಲಿ ರಾಜ್ಯದಲ್ಲಿ ಪ್ರತಿ ವರ್ಷ ಪ್ರತಿ 1000 ಜನರಲ್ಲಿ ಸರಾಸರಿ 7 – 8 ಜನರು [2000-01ನೇ ಸಾಲಿನ ಅಂಕಿ-ಅಂಶಗಳ ಪ್ರಕಾರ] ಸಾವನಪ್ಪುತ್ತಿದ್ದು, ವಾರ್ಷಿಕ ಸಾವಿನ ಪ್ರಮಾಣ 10 ಜನರು ಎಂದು ಭಾವಿಸಿ ಮುಂದಿನ 30 ವರ್ಷಗಳಿಗೆ ಸಾವನಪ್ಪಬಹುದಾದ ಸುಮಾರು 300 ಜನರ ಶವ ಸಂಸ್ಕಾರಗಳಿಗಾಗಿ ತಲಾ 60 ಚದರಡಿಯಂತೆ ಕನಿಷ್ಠ 18,000 ಚದರಡಿ, ಅಂದರೆ 18 ರಿಂದ 20 ಗುಂಟೆ ವಿಸ್ತೀರ್ಣದ ಕ್ಷೇತ್ರವನ್ನು, ಈ ಉದ್ದೇಶಕ್ಕಾಗಿ ಕಾಯ್ದಿರಿಸಲು ಸೂಚಿಸಲಾಗಿದೆ. ಅಲ್ಲದೆ, ಶವ ಸಂಸ್ಕಾರ ಮಾಡಲು ಕಾಯ್ದಿರಿಸುವ ಜಾಗವನ್ನು 'ಸಾರ್ವಜನಿಕ ಸ್ಮಶಾನ' ಎಂದು ಕರೆಯಲು ಸೂಚಿಸಿರುವುದರ ಜೊತೆಗೆ ಸದರಿ ಸ್ಥಳಗಳಲ್ಲಿ ಅವಶ್ಯಕ ನೀರು, ವಿದ್ಯುಚ್ಛಕ್ತಿ, ಆಸನಗಳು ಸೌಲಭ್ಯ ಇತ್ಯಾದಿ ಮೂಲ ಸೌಕರ್ಯ ಕಲ್ಪಿಸಲು ಸಹ ಸದರಿ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

3. ಮುಂದುವರೆದು, ಈಗಾಗಲೇ ರಾಜ್ಯದ ಅನೇಕ ಪ್ರದೇಶಗಳಲ್ಲಿ ಜಾತಿ / ಧರ್ಮಗಳನ್ನು ಆಧರಿಸಿ ಶವ ಸಂಸ್ಕಾರಕ್ಕಾಗಿ ಪ್ರತ್ಯೇಕ ಸ್ಥಳಗಳನ್ನು ಗುರುತಿಸಲು ಕೋರಿಕೆಗಳು ಬರುತ್ತಿವೆ. ಜಾತಿವಾರು ಆಧರಿಸಿ ಸ್ಮಶಾನಭೂಮಿ ಕಾಯ್ದಿರಿಸದೇ "ಸಾರ್ವಜನಿಕ ಸ್ಮಶಾನ"ಕ್ಕಾಗಿ ಕಾಯ್ದಿರಿಸಬೇಕೆಂದು ಸರ್ಕಾರದಿಂದ ಈಗಾಗಲೇ ಸೂಚನೆಗಳನ್ನು ನೀಡಲಾಗಿದೆ.

4. ಆದರೆ, ಧಾರ್ಮಿಕತೆ [Religion] ಅನುಸರಿಸಿ ಜನರ ಶವ ಸಂಸ್ಕಾರಕ್ಕಾಗಿ ಸರ್ಕಾರಿ ಜಮೀನುಗಳನ್ನು ಪ್ರತ್ಯೇಕವಾಗಿ ಕಾಯ್ದಿಸುವ ಬಗ್ಗೆ ಕೆಲವು ಜಿಲ್ಲಾಧಿಕಾರಿಗಳು ಸರ್ಕಾರದ ಮಾರ್ಗದರ್ಶನವನ್ನು ಕೋರಿದ್ದಾರೆ.

5. ಈ ಬಗ್ಗೆ ಪರಿಶೀಲಿಸಲಾಗಿ, ವಿಭಿನ್ನ ಧರ್ಮಗಳಿಗೆ ಸೇರಿದ ಜನಗಳ ಉಪಯೋಗಕ್ಕಾಗಿ ವಿಭಿನ್ನ ರೀತಿಯ ರುದ್ರಭೂಮಿ, ಸ್ಮಶಾನ, ಖಬರಸ್ತಾನ, ಕ್ರಿಶ್ಚಿಯನ್ ಸಿಮೆಟ್ರಿಗಳಿಗಾಗಿ ಈಗಾಗಲೇ ಸರ್ಕಾರಿ ಆದೇಶಗಳ ಮೂಲಕ ಜಮೀನುಗಳನ್ನು ಮಂಜೂರು ಮಾಡಲಾಗಿದ್ದು, ಈ ರೀತಿ ಧಾರ್ಮಿಕತೆ(Religion)ಯನ್ನು ಅನುಸರಿಸಿ ಪ್ರತ್ಯೇಕವಾಗಿ ಸರ್ಕಾರಿ ಜಮೀನನ್ನು ಶವ ಸಂಸ್ಕಾರಕ್ಕಾಗಿ ಕಾಯ್ದಿರಿಸುವುದು ಸಂವಿಧಾನಾತ್ಮಕವಾಗಿರುತ್ತದೆ ಎಂದು ಕಾನೂನು ಇಲಾಖೆಯು ಅಭಿಪ್ರಾಯವ್ಯಕ್ತಪಡಿಸಿರುತ್ತದೆ.

6. ಮೇಲ್ಕಂಡ ಹಿನ್ನಲೆಯಲ್ಲಿ, ಸರ್ಕಾರವು ಈಗಾಗಲೇ ಕಾಲಕಾಲಕ್ಕೆ ಹೊರಡಿಸಿರುವ ಸೂಚನೆಗಳ ಪ್ರಕಾರ ರಾಜ್ಯದಲ್ಲಿ ಎಲ್ಲೆಲ್ಲಿ ಸರ್ಕಾರಿ ಜಮೀನು ಲಭ್ಯವಿದೆಯೋ ಅಲ್ಲಿ ಅವಶ್ಯವಿರುವ ಜಮೀನನ್ನು ಸಾರ್ವಜನಿಕ ಶವ ಸಂಸ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸುವುದು ಹಾಗೂ ಎಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲವೋ ಅಲ್ಲಿ ಖಾಸಗಿ ಖುಷ್ಕಿ ಜಮೀನನ್ನು ಖರೀದಿಸಿ ಸದರಿ ಉದ್ದೇಶಕ್ಕೆ ನೀಡಲು ಮುಂದುವರೆದ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಪುನರುಚ್ಚರಿಸಿದೆ.

7. ಈ ರೀತಿ ಕ್ರಮವಹಿಸಿದರೂ ಸಹ, ಕೆಲವೊಂದು ಅನಿವಾರ್ಯ ಪ್ರಸಂಗಗಳಲ್ಲಿ ಧಾರ್ಮಿಕತೆ (Religion) ಆಧರಿಸಿ ಪ್ರತ್ಯೇಕವಾಗಿ ಸರ್ಕಾರಿ ಜಮೀನನ್ನು ಶವ ಸಂಸ್ಕಾರಕ್ಕಾಗಿ ಕಾಯ್ದಿರಿಸುವುದು ಅವಶ್ಯವೆನಿಸಿದಲ್ಲಿ, ಈ ಸುತ್ತೋಲೆಯ ಕಂಡಿಕೆ 02ರಲ್ಲಿ ವಿವರಿಸುವಂತೆ ಸುಮಾರು 300 ಜನರ ಶವ ಸಂಸ್ಕಾರಗಳಿಗಾಗಿ ತಲಾ 60 ಚದರಡಿಯಂತೆ ಕನಿಷ್ಠ 18,000 ಚದರಡಿ, ಅಂದರೆ 18 ರಿಂದ 20 ಗುಂಟೆ ವಿಸ್ತೀರ್ಣದ ಕ್ಷೇತ್ರವನ್ನು, ಜಿಲ್ಲಾಧಿಕಾರಿಗಳ ವಿವೇಚನೆಗೆ ಒಳಪಟ್ಟು, ಲಭ್ಯವಿದ್ದಲ್ಲಿ ಸರ್ಕಾರಿ ಜಮೀನನ್ನು ಅಥವಾ ಖಾಸಗಿ ಖುಷ್ಕಿ ಜಮೀನನ್ನು ಖರೀದಿಸಿ ಈ ಉದ್ದೇಶಕ್ಕೆ ಬಳಸಲು ಕಾಯ್ದಿರಿಸಬಹುದೆಂದು ಈ ಮೂಲಕ ತಿಳಿಸಲಾಗಿದೆ.

(ಡಾ: ಇ.ವಿ.ರಮಣ ರೆಡ್ಡಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ.

ಇವರಿಗೆ:

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗ.
2. ಆಯುಕ್ತರು, ಭೂದಾಖಲೆಗಳು ಮತ್ತು ಭೂ ಮಾಪನ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
4. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ. } ಜಿಲ್ಲಾಧಿಕಾರಿಗಳ ಮುಖಾಂತರ.
5. ಎಲ್ಲಾ ತಹಶೀಲ್ದಾರ್‌ಗಳಿಗೆ }

To website

ಪ್ರತಿಯನ್ನು:

1. ಸನ್ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ವಿಪತ್ತು ನಿರ್ವಹಣೆ) ಇವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.